ಅನ್ನುತ್ತಿದ್ದಂತೆ ಶೆಟ್ಟಿ 'ಮಲ್ಲಂದು, ಮಗ ಚಂದ್ರ ಕೈಗೆ ಬಂದವ್ನೆ ಸಾವ್ಕಾರ್ರೆ. ಹೋದ್ಸರಿ ಬಾಳೆ ಹಾಕಿದ್ದ. ಈ ಸರಿ ಮಾವು ಹಾಕ್ತವ್ನೆ. ಈ ಗೌರ್ಮೆಂಟು ಅವ್ರಿಗೆ ಸಬ್ಸಿಡಿ ಬ್ಯಾರೆ ಕೊಡ್ತದಂತಲ್ಲ. ಅದ್ಕೆ ಮಕ್ಳಿಗೆ ತಿಕ ಕೊಬ್ಬು ಜಾಸ್ತಿಯಾಗ್ಯೆತೆ' ಅಂದ. ಸಾಹುಕಾರ 'ಗೌರ್ಮೆಂಟು ನಮ್ಗೂ ಸಬ್ಸಿಡಿ ಕೊಡ್ತದೆ. ಆದ್ರೆ ಕಡ್ಮೆ ಶೆಟ್ಟಿ. ಆ ಮಾತಂಗಿರ್ಲಿ. ಈ ಮಲ್ಲಣ್ಣಂಗೆ ಇಂಥಾ ಧೈರ್ಯ ಎಲ್ಲಿಂದ ಬಂತು ಅಂತ' ಎಂದ. 'ಅಯ್ಯೋ ಅದ್ಯಾಕೇಳ್ತಿರಿ ಅವನೆಡ್ತಿ ನೀಲಿ ಫೇರಂಡ್ ಲವ್ಲಿ, ಪಾಂಡ್ಸ್ ಪೌಡ್ರು ಹಾಕಂಗಾಗವ್ಳೆ. ನನ್ನ ಸರ್ವಿಸ್ನಲ್ಲಿ ಕೇರಿ ಹೆಂಗ್ಸು ಮೊಕದ್ಬಗ್ಗೆ ಯೋಚ್ನೆ ಮಾಡಿದವಳಂದ್ರೆ ಇವಳೇ ಪಸ್ಟು' ಶೆಟ್ಟಿ ಮೊಗದಲ್ಲಿ ದುಗುಡವಿತ್ತು. ಸಾಹುಕಾರ ತನ್ನ ಹುಬ್ಬುಗಳನ್ನು ಮೇಲೆತ್ತಿ 'ಶೆಟ್ಟಿ, ಫೇರಂಡ್ಲವ್ಲಿ ಹಾಕೋ ಹೆಂಗಸ್ ಬಗ್ಗೆ ಇಷ್ಟು ತಡವಾಗಿ ಹೇಳಕ್ಕೆ ಕಾರಣವೇನಪ್ಪಾ. ಏನಾರ ಕತೆ ಸುರುವಾಗ್ಯೆತಾ?' ಎನ್ನಲು ಶೆಟ್ಟಿ 'ಏ ಸುಮ್ಕಿರಿ ಸಾವ್ಕಾರ್ರೆ. ಅದು ಬಾಳ ಘಾಟಿ ಹೆಂಗ್ಸು. ಬೀದೀಲೇ ಮಾನ ಹರಾಜಾಕ್ತದೆ ಅಷ್ಟೆಯಾ' ಎನ್ನುವಷ್ಟರಲ್ಲಿ ಅಂಗಡಿಗೆ ಗಿರಾಕಿ ಬಂದನು. ಸಾಹುಕಾರ್ ಬಸಪ್ಪನ ತಲೆಯಲ್ಲಿ ನೀಲಿ ಎನ್ನುವ ಹೆಸರು ಅಚ್ಚೊತ್ತಿಕೊಂಡು ಅವಳನ್ನು ನೋಡಲು ಬಜಾಜ್ ಸ್ಕೂಟರ್ ಹತ್ತೇ ಬಿಟ್ಟ. ನೀಲವ್ವ ಸೊಂಟಕ್ಕೆ ಸೀರೆ ಸಿಕ್ಕಿಸಿಕೊಂಡು ಚಂದ್ರು ತೋಡಿದ್ದ ಗುಂಡಿಯಲ್ಲಿನ ಮಣ್ಣನ್ನು ತ್ವಾಡಿಲಿಯಂತೆ ಬಾಚುತ್ತಿದ್ದಳು. ಮಲ್ಲಣ್ಣ ಟ್ರ್ಯಾಕ್ಟರಿಂದ ಮಾವಿನ ಸಸಿಗಳನ್ನ ಸಾಗಿಸುತ್ತಿದ್ದ. ಸಾಹುಕಾರ್ ಬಸಪ್ಪನನ್ನು ಕಂಡ ಕೂಡಲೇ ಓಡಿ ಬಂದು ಮಾತನಾಡಿಸಿದ. ಎಂದೂ ಇತ್ತ ಕಡೆ ಸುಳಿಯದ ಸಾಹುಕಾರನ ನಡವಳಿಕೆ ಬಸಪ್ಪನಿಗೆ ಅರ್ಥವಾಯಿತಾದರೂ ಹೇಗೆ ಸಾಗಾಕಬೇಕೋ ಹಾಗೆ ಸಾಗಾಕಿದ. ದೂರದಿಂದ ತನ್ನನ್ನೇ ನುಂಗುವಂತೆ ನೋಡುತ್ತಿದ್ದ ಬಸಪ್ಪನನ್ನು ಕಂಡು ನೀಲವ್ವ ಸೀರೆ ಇಳಿಸಿ ಸೆರಗು ಸರಿ ಮಾಡಿಕೊಂಡು ಕುಂತಳು. ಅಂದಿನಿಂದ ಸಾಹುಕಾರ ನಿದ್ದೆಗೆಟ್ಟ ನಾಯಿಯಂತಾಗಿ ಶಿವರಾತ್ರಿ ದಿನಕ್ಕಾಗಿ ಕಾಯುತ್ತಿದ್ದ.

ಅಂದು ನೀಲವ್ವನ ಮೇಲೆ ನಡೆದಿದ್ದ ಕೃತ್ಯ ನಿಜಕ್ಕೂ ಬರ್ಬರ. ನೀಲವ್ವನ ಗುಪ್ತಾಂಗಗಳಿಗೆ ಅತ್ಯಾಚಾರಿಗಳು ರಿಪೀಸು ಪಟ್ಟಿ ಮತ್ತು ಮುಳ್ಳುಗಳನ್ನು ತುರುಕಿದ್ದರಲ್ಲದೆ ಸಾರಾಯಿಯನ್ನೂ ಸುರಿದಿದ್ದರು. ಪ್ರಜ್ಞೆ ತಪ್ಪಿದ್ದ ನೀಲವ್ವನಿಗೆ ಪ್ರಾಥಮಿಕ ಚಿಕಿತ್ಸೆ ನೀಡಿದ ಊರಿನ ಡಾಕ್ಟರ್ ತಮ್ಮದೇ ಕಾರಿನ ಮೂಲಕ ಜಿಲ್ಲಾಸ್ಪತ್ರೆಗೆ ರವಾನಿಸಿದ್ದಕ್ಕೆ ನೀಲವ್ವ ಇನ್ನೂ ಉಸಿರಾಡುತ್ತಿದ್ದಾಳೆ. ಪೊಲೀಸರು ಬಂದು ಅವರ ಕೆಲಸ ಮಾಡಿಕೊಂಡು ಕೇಸು ದಾಖಲಾಯಿತು. ಮಲ್ಲಣ್ಣ ಸಾಹುಕಾರ್ ಬಸಪ್ಪನನ್ನೇ ನೇರ ಆರೋಪಿ ಮಾಡಿದ. ಇದಕ್ಕೆ ಊರಿಗೆ ಊರೇ ಕೇರಿಯ ಮೇಲೆ ಎಗರಿ ಬಿದ್ದಿತು. ಕೇರಿಯ ಜನ ನೀಲವ್ವನ ಪರವಾಗಿ ಒಗ್ಗಟ್ಟಾಗಿ ನಿಂತಿತು. ಪಟ್ಟಣದಿಂದ ರಾಜಿ ಅಂತ ನಾಟಕ ಮಾಡಿಕೊಂಡು ಬಂದ ನಾಯಕರನ್ನೂ ಉಗಿದು ಅಟ್ಟಿತು. ಎರಡು ತಿಂಗಳು ಗೌರ್ಮೆಂಟ್ ಆಸ್ಪತ್ರೆಲಿ ಇದ್ದ ನೀಲವ್ವ ಕೇರಿಗೆ ಬಂದಳು. ಆದರೆ ವರುಷವಾಗುತ್ತಾ ಬಂದರೂ ಸಾಹುಕಾರ್ ಬಸಪ್ಪ ಅರೆಸ್ಟ್ ಆಗಲಿಲ್ಲ. ಪೊಲೀಸರು ಮಲ್ಲಣ್ಣನನ್ನ ಕ್ಯಾರೇ ಎನ್ನಲಿಲ್ಲ. ಕೋರ್ಟ್ ಎರಡು ಬಾರಿ ಸಾಕ್ಷಿ ಹೇಳಕ್ಕೆ ಕರೆದಿತ್ತು; ಆಮೇಲೆ ಕರೀಲೆ ಇಲ್ಲ. ಸರ್ಕಾರ ನೇಮಕ ಮಾಡಿದ ಲಾಯರ್ ಸಾಕ್ಷಿ ಇಲ್ಲದೆ ಕೇಸ್ ನಿಲ್ಲಲ್ಲ, ವೈದ್ಯಕೀಯ ವರದಿಯೂ ಕೈ ಹಿಡಿಯುವಂಗಿಲ್ಲ, ಈಗ ನಮಗೆ ನೀಲವ್ವನ ಸಾಕ್ಷಿಯೇ ಗತಿ ಅಂತ ಹೇಳಿ ಕೈ ಚೆಲ್ಲಿದ್ದರು.

ಮಲ್ಲಣ್ಣ ಅಂದಿನಿಂದಲೂ ಸಾಹುಕಾರನ ಸಾವು ಬಯಸಿದ್ದ. ಮಗ ಚಂದ್ರುವಿಗೆ ಸಾಹುಕಾರನನ್ನು ಹೊಂಚುಹಾಕಿ ಕೊಂದುಬಿಡೋಣ. ಸಿಕ್ಕಿ ಹಾಕಿಕೊಂಡರೆ ನಾನು ಜೈಲು ಪಾಲಾಗ್ತಿನಿ. ನೀನು ನಿಮ್ಮವ್ವನ್ನ ಚೆನ್ನಾಗಿ ನೋಡ್ಕೊ ಎಂದೆಲ್ಲಾ ಹೇಳುತ್ತಿದ್ದ. ಆದರೆ ಚಂದ್ರು ಅದರ ಬಗ್ಗೆ ತಲೆಕೆಡಿಸಿಕೊಳ್ಳದ್ದಕ್ಕೆ ವ್ಯಥಿತನಾಗುತ್ತಿದ್ದ.

ಹಾರನ್ ಶಬ್ದಕ್ಕೆ ಬೆಚ್ಚಿ ಬಿದ್ದ ನೀಲವ್ವನ ಸಮಾಧಾನಿಸಿ ಬಸ್ಸಿಳಿದು ನೀಲವ್ವನ ಜೊತೆ ಮಲ್ಲಣ್ಣ